**ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ**

**ಜಾನುವಾರು, ಕುಕ್ಕುಟ ಮತ್ತು ಮತ್ಸ್ಯ ಮೇಳ – 2025**

# ಷರತ್ತು ಮತ್ತು ನಿಬಂಧನೆಗಳು

(ಅರ್ಜಿದಾರರ ಬಳಿ ಇರತಕ್ಕದ್ದು)

1. ಮಳಿಗೆಗಳನ್ನು ಕಾಯ್ದಿರಿಸುವಾಗ ಜಾನುವಾರು ತಾಂತ್ರಿಕತೆ/ಉತ್ಪನ್ನಗಳನ್ನು ಪ್ರದರ್ಶನ/ಮಾರಾಟ ಮಾಡುವ ಅರ್ಜಿದಾರರಿಗೆ ಆದ್ಯತೆ ನೀಡಲಾಗುವುದು. ತದನಂತರ ಮಳಿಗೆಗಳು ಲಭ್ಯವಿದ್ದಲ್ಲಿ ಮಾತ್ರ ಇತರರಿಗೆ ಮಳಿಗೆಗಳನ್ನು ಹಂಚಲಾಗುವುದು.
2. ಜಾನುವಾರು ಉತ್ಪನ್ನಗಳ ಪ್ರದರ್ಶನ/ ಮಾರಾಟವನ್ನು ನಿಗದಿಪಡಿಸಿದ ಸ್ಥಳಗಳಲ್ಲಿ / ಮಳಿಗೆಗಳಲ್ಲಿ ಮಾತ್ರ ಮಾಡತಕ್ಕದ್ದು.
3. ಜಾನುವಾರು ವಸ್ತು ಪ್ರದರ್ಶನ ಸ್ಥಳದಲ್ಲಿ ಯಾವುದೇ ತರಹದ ವಾಹನಗಳು ಓಡಾಡಲು ಅವಕಾಶವಿಲ್ಲ. ನಿಗದಿಪಡಿಸಿದ ವಾಹನ ನಿಲ್ದಾಣದಲ್ಲಿ ಮಾತ್ರ ಅದನ್ನು ನಿಲ್ಲಿಸತಕ್ಕದ್ದು.
4. ಪ್ರದರ್ಶನಕಾರರು ತಮಗೆ ಹಂಚಿದ ಮಳಿಗೆಗಳನ್ನು ತಾವೇ ಉಪಯೋಗಿಸಬೇಕು ಹಾಗೂ ಯಾವುದೇ ಪರಸ್ಪರ ಬದಲಾವಣೆಗೆ ಅವಕಾಶವಿಲ್ಲ.
5. ಮಳಿಗೆಗಳಲ್ಲಿಡಬೇಕಾದ ಸಾಮಾನುಗಳನ್ನು ದಿನಾಂಕ 16.01.2025ರ ರಾತ್ರಿ 10.00 ಗಂಟೆಯೊಳಗಾಗಿ ತಂದು ಜೋಡಿಸಿಕೊಳ್ಳಬೇಕು ಹಾಗೂ ತಮ್ಮ ವಾಹನಗಳನ್ನು ತಕ್ಷಣವೇ ಕಡ್ಡಾಯವಾಗಿ ಅಲ್ಲಿಂದ ಹೊರತೆಗೆಯಬೇಕು. ದಿನಾಂಕ 17.01.2025ರ ಬೆಳಿಗ್ಗೆ 6.00 ಗಂಟೆಯ ಮೇಲೆ ಅಲ್ಲಿರುವ ವಾಹನಗಳನ್ನು ಜಪ್ತಿ ಮಾಡಲಾಗುವುದು.
6. ವಿಶ್ವವಿದ್ಯಾಲಯದ ಆವರಣದಲ್ಲಿ ಭಿತ್ತಿ ಪತ್ರ/ ಹ್ಯಾಂಡ್ ಬಿಲ್ ಹಚ್ಚುವುದನ್ನು ನಿಷೇಧಿಸಲಾಗಿದೆ ಹಾಗೂ ಕಾನೂನು ಉಲ್ಲಂಘನೆ ಮಾಡಿದವರಿಗೆ ದಂಡ ವಿಧಿಸಲಾಗುವುದು.
7. ಪ್ರತಿ ಮಿತವ್ಯಯ ಮಳಿಗೆಯ (Economy stalls) ಛಾವಣಿಯನ್ನು ಜಿಂಕ್ ಶೀಟ್‌ನಿಂದ ಕಟ್ಟಿ ಪಕ್ಕದ ಮಳಿಗೆಗೆ ಬಟ್ಟೆಯ ಸಹಾಯದಿಂದ ಬೇರ್ಪಡಿಸಲಾಗುವುದು. ಪ್ರತಿ ಮಳಿಗೆಗೆ 2 ಪ್ಲಾಸ್ಟಿಕ್ ಕುರ್ಚಿಗಳು, 2 ಟೇಬಲ್‌ಗಳು, 2 ಟ್ಯೂಬ್‌ಲೈಟ್ಸ್ ಹಾಗೂ ಒಂದು 5 amps ನ ವಿದ್ಯುತ್ ಪಾಯಿಂಟನ್ನು ಒದಗಿಸಲಾಗುವುದು.
8. ಪ್ರತಿ ಸುಸಜ್ಜಿತ ಮಳಿಗೆಗಳನ್ನು (Fabricated stalls) ಮಳೆ ನೀರು ಸೋರದಂತೆ ಫ್ಯಾಬ್ರೀಕೇಶನ್ ಮುಖಾಂತರ ಸಿದ್ಧಪಡಿಸಲಾಗುವುದು. ಅಲಂಕಾರಿಕ ಬಟ್ಟೆಯ ಸಹಾಯದಿಂದ ಮೇಲ್ಛಾವಣಿ ಹಾಗೂ ಫ್ಲೋರ್ ಮ್ಯಾಟ್ಸ್ ಮತ್ತು 400 ವ್ಯಾಟ್‌ನ ಬಲ್ಬ್ ವ್ಯವಸ್ಥೆಯಿದೆ. ಪ್ರತಿ ಮಳಿಗೆಗೆ 2 ಟ್ಯೂಬ್ ಲೈಟ್ಸ್, ಒಂದು 5 amps ನ ವಿದ್ಯುತ್ ಪಾಯಿಂಟ್, 2 ಪ್ಲಾಸ್ಟಿಕ್ ಕುರ್ಚಿಗಳು, 2 ಟೇಬಲ್‌ಗಳನ್ನು ಕೊಡಲಾಗುವುದು.
9. ಖುಲ್ಲಾ ಜಾಗದಲ್ಲಿ ಜಾನುವಾರು ಪ್ರದರ್ಶನ ಮಾಡುವುದನ್ನು ನಿಷೇಧಿಸಲಾಗಿದೆ.
10. ಯಾವುದೇ ಹೆಚ್ಚುವರಿ ಸೌಲಭ್ಯಗಳು ಬೇಕಾದಲ್ಲಿ ಪ್ರದರ್ಶನಕಾರರು ನೇರವಾಗಿ ಗುತ್ತಿಗೆದಾರರಿಂದ ಬಾಡಿಗೆ ಆಧಾರದ ಮೇಲೆ ಪಡೆಯತಕ್ಕದ್ದು.
11. ಖುಲ್ಲಾ ಜಾಗದಲ್ಲಿ ಮಳಿಗೆಗಳನ್ನು ಹಾಕುವುದನ್ನು ನಿಷೇಧಿಸಲಾಗಿದೆ.
12. ಒಂದು ಸಾರಿ ಪಾವತಿಯಾದ ಹಣವನ್ನು ಯಾವುದೇ ಕಾರಣಕ್ಕೂ ಹಿಂತಿರುಗಿಸುವುದಿಲ್ಲ.
13. ತಮ್ಮ ತಮ್ಮ ಮಳಿಗೆಗಳಲ್ಲಿನ ವಸ್ತುಗಳ ಸುರಕ್ಷತೆಗೆ ತಾವೇ ಜವಾಬ್ದಾರರು.
14. ಮಳಿಗೆಗಳನ್ನು ಪ್ರದರ್ಶನಕಾರರಿಗೆ ಒಂದು ದಿನ ಮುಂಚಿತವಾಗಿ (16.01.2025) ಹಂಚಿಕೆ ಮಾಡಲಾಗುವುದು.
15. ಮಳಿಗೆಗಳಲ್ಲಿ ಅಡಿಗೆ ಮಾಡುವುದು, ಮಧ್ಯಪಾನ ಹಾಗೂ ಜೂಜಾಡುವುದನ್ನು ನಿಷೇಧಿಸಲಾಗಿದೆ.
16. ಮೈಕ್ ಅಥವಾ ಟಿವಿ ಬಳಕೆ ಮಾಡುವವರು ಪಕ್ಕದವರಿಗೆ ತೊಂದರೆಯಾಗದಂತೆ ಎಚ್ಚರ ವಹಿಸಬೇಕು.
17. ಅರ್ಜಿಯಲ್ಲಿ ನಮೂದಿಸಿದ ಉತ್ಪನ್ನ/ವಸ್ತುಗಳನ್ನು ಮಾತ್ರ ಮಳಿಗೆಗಳಲ್ಲಿ ಪ್ರದರ್ಶನ / ಮಾರಾಟ ಮಾಡತಕ್ಕದ್ದು.
18. ಮಳಿಗೆಗಳಲ್ಲಿ ಅಡಿಗೆ ಮಾಡುವುದು, ತಿನ್ನುವ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುವುದನ್ನು ನಿಗದಿತ ಮಳಿಗೆಗಳಿಗೆ ಮಾತ್ರ ಅನುಮತಿಸಲಾಗುವುದು.
19. ಪ್ರದರ್ಶನಕಾರರ ಯಾವುದೇ ವಸ್ತುಗಳ ಹಾನಿ / ನಷ್ಟಕ್ಕೆ ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರ, ಜವಾಬ್ದಾರಿಯಲ್ಲ ಹಾಗೂ ಯಾವುದೇ ತರಹದ ವಿವಾದಕ್ಕೆ ವಿಶ್ವವಿದ್ಯಾಲಯದ ನಿರ್ಧಾರವೇ ಅಂತಿಮವಾಗಿರುತ್ತದೆ.
20. ಮಳಿಗೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡಿರಿ ಹಾಗೂ ಮಳಿಗೆಯಲ್ಲಿ ಕಸದ ಡಬ್ಬಿ ಇಡಬೇಕು. ಪ್ಲಾಸ್ಟಿಕ್ ಮತ್ತು ಇತರ ಕಸವನ್ನು ಹೊರಗೆ ಚೆಲ್ಲುವುದನ್ನು ನಿಷೇಧಿಸಲಾಗಿದೆ.

***ಗುಟ್ಕಾ, ತಂಬಾಕು ಹಾಗೂ ಪ್ಲಾಸ್ಟಿಕ್ ರಹಿತ ಜಾನುವಾರು, ಕುಕ್ಕುಟ ಮತ್ತು ಮತ್ಸ್ಯ ಮೇಳವನ್ನು ಆಚರಿಸಲು ಸಹಕರಿಸಿ.***